ವಿಷಯ : ರಾಜ್ಯದ ಜಲಾಶಯಗಳ ಮೂಲಕ ನೀರಾವರಿಯಾಗುವ ಜಮೀನಿನ ವಿಸ್ತೀರ್ಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 136 (157)

ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೃಹತ್, ಮಧ್ಯಮ ಜಲಾಶಯಗಳು ಗರಿಷ್ಟ ಮಟ್ಟಕ್ಕೆ ಜಲ ಸಂಗ್ರಹಣೆಯಾದ ಸಂದರ್ಭದಲ್ಲಿ ಒಟ್ಟು ಎಷ್ಟು ಟಿ.ಎಂ.ಸಿ. ನೀರು ದೊರೆತಂತೆ ಆಗುತ್ತದೆ;

ಆ) ಇದರಿಂದ ಎಷ್ಟು ಹೆಕ್ಟೇರು ಪ್ರದೇಶದಲ್ಲಿ ಬೆಳೆ ತೆಗೆಯಬಹುದು ಅದರಿಂದ ಎಷ್ಟು ಟನ್ ಆಹಾರ ಪದಾರ್ಥ ದೊರೆಯಬಹುದು ಸರ್ಕಾರಕ್ಕೆ ಬರುವ ನೀರಿನ ತೆರಿಗೆ ಇತ್ಯಾದಿ ಎಷ್ಟಾಗಬಹುದು

ಇ) ರಾಜ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಿರುವ ಭೂಮಿಯಲ್ಲಿ ಇದು ಶೇಕಡಾ ಎಷ್ಟರಷ್ಟು ಆಗುತ್ತದೆ.

ಈ) ಒಂದು ಹೆಕ್ಟೇರ್ ಭೂಮಿಯನ್ನು ನೀರಾವರಿ ವ್ಯವಸಾಯಕ್ಕೆ ಒಳಪಡಿಸಲು ಸರಾಸರಿ ಎಷ್ಟು ಹಣ ಬೇಕಾಗುತ್ತದೆ?

ಶ್ರೀ ಎಸ್ ಎಂ ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಪ್ರಸ್ತುತ ಪೂರ್ಣಗೊಂಡಿರುವ ಭಾರಿ ಮತ್ತು ಮಧ್ಯಮ ನೀರಾವರಿ ಜಲಾಶಯಗಳ ಒಟ್ಟು ನೀರು ಸಂಗ್ರಹಣಾ ಸಾಮರ್ಥ್ಯವು 515.33 ಟಿಎಂಸಿಗಳು.

ಆ) ಇದು ಪ್ರತಿಯೊಂದು ಯೋಜನೆಯಲ್ಲೂ ಬೆಳೆಯಲಾಗುವ ಬೆಳೆಗಳನ್ನು ಮತ್ತು ಈ ಬೆಳೆಗಳನ್ನು ಬೆಳೆಯುವ ಋತುಗಳನ್ನು ಅವಲಂಬಿಸಿದೆ.

ಇ) ಪ್ರಸ್ತುತ ದರದಂತೆ ಸರಾಸರಿ ಎಪ್ಪತ್ತೈದು ಸಾವಿರ ರೂಗಳು.

ಶ್ರೀ ಜಿ. ರಾಜುಗೌಡ : ಸ್ವಾಮಿ ,ಈಗ ಕೈಗೆತ್ತಿಕೊಂಡಿರತಕ್ಕ ನೀರಾವರಿ ಕಾಮಗಾರಿಗಳು ಅಂದರೆ ಬೃಹತ್ ಮತ್ತು ಮಧ್ಯಮ ಜಲಾಯಶಗಳ ಕಾಮಗಾರಿಗಳು ಪೂರ್ಣವಾದಾಗ ಎಷ್ಟು ನೀರು ಸಂಗ್ರಹವಾಗಬಹುದು. ಅದರಿಂದ ಅರೆಕೃಷಿ ಬಳಕೆಗೆ ಎಷ್ಟು ನೀರು ಸಿಗುತ್ತದೆ ಎಂಬುದನ್ನು ದಯಮಾಡಿ ತಿಳಿಸಿ.

ಶ್ರೀ ಎಸ್.ಎಂ.ಕೃಷ್ಣ : ಈಗ ಎಷ್ಟು ಜಲಸಂಗ್ರಹಣೆ ಆಗುತ್ತದೆ ಎಂಬುದು ನಾನಾ ವಿಚಾರಗಳನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಕೃಷ್ಣ ನೀರಿನ ಬಗ್ಗೆ 2000 ಇಸವಿಗೆ ಪಾರ್ಟ್-ಬಿ ಬಚಾವತ್ ಅವಾರ್ಡ್ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವಾಗ ನಮ್ಮ ಪಾಲಿಗೆ ಎಷ್ಟು ನೀರು ಬರುತ್ತದೆ ಎಂಬ ಬಗ್ಗೆ ಇವತ್ತೇ ನಾವು ಯಾವುದನ್ನೂ ಖಚಿತವಾಗಿ ಹೇಳುವುದಕ್ಕೆ ಬರುವುದಿಲ್ಲ. ಹಾಗೇ ಕಾವೇರಿ ಜಲಾನಯನ ಪ್ರದೇಶದ ವಿಷಯ ಟ್ರಿಬ್ಯುನಲ್ ಮುಂದೆ ಇದೆ. ಅವರು ಅಂತಿಮವಾಗಿ

ಎಷ್ಟು ನೀರನ್ನು ನಮಗೆ ಲಭ್ಯ ಮಾಡಿಕೊಡುತ್ತಾರೆ ಎಂಬ ಬಗ್ಗೆ ಇವತ್ತು ಅಂದಾಜು ಮಾಡುವುದಕ್ಕಾಗುವುದಿಲ್ಲ. ಇದೆಲ್ಲಾ ಅನಿಶ್ಚಿತತೆ ಇರುವುದರಿಂದ ಇರುವುದರಿಂದ ನಾವು ಕರಾರುವಕ್ಕಾಗಿ ಇಷ್ಟೇ ನೀರು ಸಂಗ್ರಹ ಮಾಡುವುದಕ್ಕೆ ಸಾಧ್ಯ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ರಾಜುಗೌಡ : ನನ್ನ ಅಭಿಪ್ರಾಯ ಏನೆಂದರೆ ಈ ರಾಜ್ಯದಲ್ಲಿರತಕ್ಕ ಎಲ್ಲಾ ಹಳ್ಳಕೊಳ್ಳಗಳನ್ನು ಪೂರ್ತಿ ಉಪಯೋಗಿಸಿಕೊಂಡಾಗ ಬಹುಶಃ ಜಲಸಂಗ್ರಹದ ಸಾಮರ್ಥ್ಯ ಎಷ್ಟಾಗಬಹುದು? ಅದರಿಂದ ವ್ಯವಸಾಯಕ್ಕೆ ಯೋಗ್ಯವಾಗಿರತಕ್ಕ ಭೂಮಿಯಲ್ಲಿ ಎಷ್ಟು ವ್ಯವಸಾಯ ಮಾಡುವುದಕ್ಕೆ ಆಗುತ್ತದೆ? ತಾವು ಒಂದು ಹೆಕ್ಟೇರ್‌ಗೆ 75 ಸಾವಿರ ರೂಪಾಯಿ ಖರ್ಚಾಗುತ್ತದೆಂದು ಏನು ಹೇಳಿದ್ದೀರಿ ಬಹುಶಃ ಯಾವುದೇ ನೀರಾವರಿ ಯೋಜನೆ ಕೈಗೆತ್ತಿಕೊಂಡಾಗ ವೆಚ್ಚದ ಗರಿಷ್ಟ ಮಿತಿ ಎಷ್ಟು? ಅದಕ್ಕಿಂತ ಜಾಸ್ತಿಯಾದಾಗ ಫೀಸಬಲ್ ಅಲ್ಲ ಎಂದು ಹೇಳುತ್ತೀರಿ. ಈ ವರ್ಷದಲ್ಲಿ ಅತ್ಯಂತ ಗರಿಷ್ಟ ವೆಚ್ಚದ ಮಿತಿ ಎಷ್ಟು ತಿಳಿಸಬೇಕು. ಭೂಮಿ ಕೆಳಗೆ ಇರತಕ್ಕ ಜಲಸಂಪತ್ತು ಬೇಕಾಗಿಲ್ಲ. ಭೂಮಿ ಮೇಲೆ ಇರತಕ್ಕ ಜಲಸಂಪತ್ತನ್ನು ಪೂರ್ಣವಾಗಿ ಉಪಯೋಗಿಸಿಕೊಂಡಾಗ ಬಹುಶ: ನಮ್ಮ ಜಲಸಂಗ್ರಹದ ಸಾಮರ್ಥ್ಯ ಎಷ್ಟಾಗುತ್ತದೆ? ಅರೆ ಕೃಷಿ ಬೆಳೆಗೆ ಎಷ್ಟು ನೀರಾವರಿಯಾಗುತ್ತದೆ ಎಂಬ ಬಗ್ಗೆ ಒಂದು ಸಮೀಕ್ಷೆ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ ಬಹಳ ಕಷ್ಟದಲ್ಲಿ ಸಮೀಕ್ಷೆಯಾಗುತ್ತದೆ. ಏಕೆಂದರೆ ಕೆಲವು ಕಡೆ ಅರೆ ಖುಷ್ಕಿ ನೀರಾವರಿಗೆ ನೀರು ಕೊಡುತ್ತೇವೆ ರೈತರು ಕಬ್ಬು ಮತ್ತು ಬತ್ತ ಬೆಳೆಯುತ್ತಾರೆ. ಕ್ರಾಪ್ ಪ್ಯಾಟ್ರನ್‌ನಲ್ಲಿ ಶಿಸ್ತು ಇಲ್ಲ. ಹಳ್ಳಕೊಳ್ಳಗಳಲ್ಲಿ ಸಂಗ್ರಹವಾಗತಕ್ಕ ನೀರು ಎಷ್ಟೆಂಬುದರ ಬಗ್ಗೆ ನಾವು ಇದುವರೆಗೂ ಸಮೀಕ್ಷೆ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಸಂಗ್ರಹ ಮಾಡುವುದರಿಂದ ಫಲ ದೊರಕುತ್ತದೆಂದರೆ ಅದನ್ನು ಮಾಡಬಹುದು.

ಶ್ರೀ ಜಿ . ರಾಜೂಗೌಡ : ಸಾಮಾನ್ಯವಾಗಿ ನೀರಾವರಿ ತಜ್ಞರು ಅಭಿಪ್ರಾಯಪಟ್ಟಿರುವ ಪ್ರಕಾರ ಟಿಎಂಸಿ ನೀರಿನಲ್ಲಿ ಸುಮಾರು 10 ಸಾವಿರ ಎಕರೆ ಅರೆ ಖುಷ್ಕಿ ಬೆಳೆ ಬೆಳೆಯಬಹುದು. ತಾವು 515 ಟಿಎಂಸಿ ನೀರು ಸಂಗ್ರಹ ಮಾಡತಕ್ಕ ಸಾಮರ್ಥ್ಯವಿದೆಯೆಂದು ಹೇಳುವುದರಿಂದ ಬಹುಶಃ 51 ಲಕ್ಷದ 50 ಸಾವಿರ ಎಕರೆ ಭೂಮಿಯಲ್ಲಿ ಅರೆ ಖುಷ್ಕಿ ಬೆಳೆ ಮಾಡಬಹುದು. ಇದರಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ನೀರು ಎಷ್ಟೆಷ್ಟು ದೊರಕುತ್ತದೆಂದು ತಾವು ಹೇಳುವುದಕ್ಕಾಗುವುದಿಲ್ಲವೆ? ಅದನ್ನು ದಯಮಾಡಿ ಮಾನ್ಯ ಉಪಮುಖ್ಯಮಂತ್ರಿಗಳು ತಿಳಿಸುವರೆ?

ಶ್ರೀ ಎಸ್. ಎಂ ಕೃಷ್ಣ : ಮಾನ್ಯ ,ಸದಸ್ಯರು ತಮ್ಮ ಪ್ರಶ್ನೆಗೆ ತಾವೇ ಉತ್ತರ ಹೇಳಿದ್ದಾರೆ.

ವಿಷಯ : ಬಾಗೇವಾಡಿ ಮತ ಕ್ಷೇತ್ರದಲ್ಲಿ ಏತನೀರಾವರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 137(741)

ಶ್ರೀ ಕೆ ಮಾದಗೇಕರ್ ದೇಸಾಯಿ (ಹಿರೇಬಾಗೇವಾಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ